ಇಂದು ದಿಃ**28-06-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಆರ್ ವಕೀಲರಿಂದ 1 ರಿಂದ 6, 19(ಎ) ದಿಂದ (ಡಿ) ಪ್ರತಿವಾದಿಗಳ ಪರಃ**

ನಾನು 2 ನೇ ಪಿ.ಯು.ಸಿ ಯವರೆಗೆ ಶಾಲೆ ಕಲಿತ್ತಿದ್ದೇನೆ. ನನ್ನ ಜನ್ಮ ದಿನಾಂಕಃ20-07-1989 ಇರುತ್ತದೆ. ನಾನು ಈಗ K.S.R.T.C ಯಲ್ಲಿ ಚಾಲಕ ಮತ್ತು ನಿರ್ವಾಹಕ ಎಂದು ಕೆಲಸ ಮಾಡುತ್ತಿದ್ದೇನೆ. ನನ್ನ ತಂದೆ 1967-68 ರಲ್ಲಿ ಜನಿಸಿರುತ್ತಾರೆ. ದಿನಾಂಕಃ10-04-1988 ರಂದು ನನ್ನ ಅಜ್ಜ ಹಾಲಯ್ಯ ಮೃತ ಪಟ್ಟಿರುತ್ತಾರೆ. ನನ್ನ ತಂದೆಗೆ ನನ್ನ ಅಜ್ಜ ತೀರಿಕೊಂಡಾಗ ಸುಮಾರು 18 ಅಥವಾ 19 ವರ್ಷ ವಯಸ್ಸು ಇತ್ತು ಎಂದರೆ ಇರಬಹುದು. ನನ್ನ ತಂದೆ ಪ್ರಾರಂಭದಲ್ಲಿ ಖಾಸಗೀ ಬಸ್ ನಲ್ಲಿ ಕ್ಲೀನರ್ ಎಂದು ಕೆಲಸ ಮಾಡುತ್ತಿದ್ದರು. ಈಗ ನನ್ನ ತಂದೆ ಮಲೇಬೆನ್ನೂರಿನ ರಾಜರಾಜೇಶ್ವರಿ ಎಂಬ ಖಾಸಗೀ ಶಾಲೆಯಲ್ಲಿ ಚಾಲಕ ಎಂದು ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನಾಗಲೀ, ನನ್ನ ತಂದೆಯಾಗಲೀ ಯಾವುದೇ ಜಮೀನಿನ ಸಾಗುವಳಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜನ ಕಾಲದಿಂದಲೂ ನಾವು ಯಾವುದೇ ಜಮೀನಿನ ಸಾಗುವಳಿ ಮಾಡದೇ ಇದ್ದರೂ, ಅನುಭವದಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ್ 67/3, 67/2, 67/4, 67/5 ಮತ್ತು 67/ಪಿ ಇರುತ್ತವೆ. ಈ ಜಮೀನುಗಳು ಗೋವಿನಹಾಳು ಗ್ರಾಮದ ಸರ್ವೆ ನಂಬರ್ ಗಳಲ್ಲಿ ಬರುತ್ತವೆ. ನಮ್ಮ ವಾದಪತ್ರ ತಯಾರಿಸಲು ವಕೀಲರಿಗೆ ನಾವೇ ಮಾಹಿತಿಕೊಟ್ಟಿರುತ್ತೇವೆ. ವಾದಪತ್ರದಲ್ಲಿ ಆಸ್ತಿಗಳು ನಂದಿಗುಡಿ ಗ್ರಾಮದಲ್ಲಿ ಬರುತ್ತದೆ ಎಂದು ನಮೂದು ಇದೆ ಎಂದರೆ ಸರಿ. ಜಮೀನುಗಳು ಗೋವಿನಹಾಳುವಿನಲ್ಲಿ ಬರುತ್ತವೆ.

ನಾನು ನನ್ನ ಅಜ್ಜ ಹಾಲಯ್ಯನನ್ನು ನೋಡಿಲ್ಲ. ನನ್ನ ಅಜ್ಜ ತೀರಿಕೊಳ್ಳುವ ಸಮಯದಲ್ಲಿ ಅಥವಾ ಅದರ ಪೂರ್ವದಲ್ಲಿ ಆತನ ಹೆಸರಿಗೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿ. ಆ ಕಾರಣದಿಂದ ನಾನಾಗಲೀ ಅಥವಾ ನನ್ನ ತಂದೆಯಾಗಲೀ ಯಾವುದೇ ಜಮೀನಿನ ಅನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 67 ಮೂಲತಃ 12 ಎಕರೆ 20 ಗುಂಟೆ ಇರುತ್ತದೆ. ಪೂರ್ಣ 12 ಎಕರೆ ಜಮೀನಿನ ಪೂರ್ವಕ್ಕೆ ಮಠದ ಹೊಲ ಬರುತ್ತದೆ. ಮಾರಾಟ ಮಾಡಿದ ಜಮೀನು ಪೂರ್ವ ದಿಕ್ಕಿಗೆ ಬರುತ್ತದೆ. ಅದನ್ನು ಭೂದಿಗೌಡ ಅನುಭವಿಸುತ್ತಿದ್ದಾನೆ. 18 ನೇ ಪ್ರತಿವಾದಿ ಭೂದಿಗೌಡ, ರಾಮಚಂದ್ರಪ್ಪ ಎನ್ನುವವರಿಂದ ಖರೀದಿ ಮಾಡಿರುತ್ತಾನೆ ಎಂದರೆ ಗೊತ್ತಿಲ್ಲ. ನನ್ನ ಮುತ್ತಜ್ಜನ ಹೆಸರು ನಂದಿತಾವರೆ ನಂದೆಪ್ಪ ತಂದೆ ಕರಿಬಸಪ್ಪ. ನನ್ನ ಅಜ್ಜ ಮತ್ತು ಮುತ್ತಜ್ಜನನ್ನು ನಾನು ನೋಡಿಲ್ಲ. ನನ್ನ ಮುತ್ತಜ್ಜನಿಗೆ 4 ಜನ ಮಕ್ಕಳು. ನಾನು ನನ್ನ ಮುತ್ತಜ್ಜನ ವಂಶಾವಳಿ ತೋರಿಸಲು ವಂಶವೃಕ್ಷ ಹಾಜರುಪಡಿಸಿದ್ದೇನೆ. ಸಾಕ್ಷಿಗೆ ಅವರು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಿ ಕೇಳಲು ನಾನು ಕಂದಾಯ ಇಲಾಖೆಯವರು ನೀಡುವ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ನನ್ನ ಮುತ್ತಜ್ಜನಿಗೆ ಗುರುಶಾಂತಯ್ಯ ಮತ್ತು ಹಾಲಯ್ಯ ಎಂಬ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ಇಬ್ಬರಲ್ಲಿ ಗುರುಶಾಂತಯ್ಯ ಹಿರಿಯರು ಎಂದರೆ ಸರಿ. ನನ್ನ ಅಜ್ಜ ಚಿಕ್ಕವರು ಎಂದರೆ ಸರಿ. ನನ್ನ ಅಜ್ಜನಿಗೆ ನನ್ನ ತಂದೆ ಒಬ್ಬರೇ ಮಗ ಎಂದರೆ ಸರಿ. ನನ್ನ ತಂದೆಗೆ ನಾನೇ ಒಬ್ಬನೇ ಮಗ ಎಂದರೆ ಸಾಕ್ಷಿ, ನನಗೆ ಸಹೋದರಿ ಇದ್ದಾಳೆ ಎಂದು ಹೇಳುತ್ತಾರೆ. ನನ್ನ ತಂಗಿಯನ್ನು ಈ ದಾವೆಯಲ್ಲಿ ಪಕ್ಷಗಾರ ಎಂದು ಸೇರಿಸಿಲ್ಲ. 1 ರಿಂದ 6 ನೇ ಪ್ರತಿವಾದಿಯರು ಗುರುಶಾಂತಯ್ಯನ ವಾರಸುದಾರರು ಎಂದರೆ ಸರಿ. ನನ್ನ ತಂದೆಯ ಆರೋಗ್ಯ ಸ್ಥಿತಿ ಚೆನಾಗಿ ಇದೆ ಎಂದರೆ ಸರಿ. ಈ

ದಾವೆಯಲ್ಲಿ ನನ್ನ ತಂದೆಗೆ ಸಾಕ್ಷಿ ಹೇಳಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಆತ ಅವಿಧ್ಯಾವಂತ ಎಂದು ಹೇಳುತ್ತಾರೆ. ನನ್ನ ತಂದೆಗೆ ಈ ದಾವೆ ನಡೆಸಲು ಇಷ್ಟ ಇಲ್ಲದೇ ಇರುವ ಕಾರಣ, ಅವರ ಸಾಕ್ಷಿ ಮಾಡಿಸಿಲ್ಲ ಎಂದರೆ ಸರಿಯಲ್ಲ.

ನಿ.ಪಿ-4 ನ್ನು ಸಾಕ್ಷಿಗೆ ತೋರಿಸಿ, ಅದರ ಪ್ರಕಾರ 1948 ನೇ ಇಸವಿಯಲ್ಲಿ ನನ್ನ ಅಜ್ಜ ಹಾಲಯ್ಯ ಅವರ ಹಿಸ್ಸೆಯ 6 ಎಕರೆ 10 ಗುಂಟೆ ಜಮೀನನ್ನು ಗಂಟಿ ಭರಮಗೌಡ ತಂದೆ ಕರಿಬಸಪ್ಪ ಎನ್ನುವವರಿಗೆ ಮಾರಾಟ ಮಾಡಿದ ಬಗ್ಗೆ ಇದೆ ಎಂದರೆ ಸರಿಯಲ್ಲ. ದಿನಾಂಕಃ01-03-1948 ರಂದು ಈ ಕ್ರಯಪತ್ರ ಆಗಿದೆ ಎಂದರೆ ಸರಿಯಲ್ಲ. ಈ ದಾಖಲೆಯನ್ನು ನಾನೇ ಉಪನೊಂದಣಾಧಿಕಾರಿಗಳ ಕಚೇರಿಯಿಂದ ತೆಗೆಗಿಸಿಕೊಂಡು ಬಂದಿರುತ್ತೇನೆ ಎಂದರೆ ನೆನಪಿಲ್ಲ. ಸಾಕ್ಷಿಗೆ ನಿ.ಪಿ-5 ನ್ನು ತೋರಿಸಿ ನನ್ನ ಅಜ್ಜ ಮಾರಾಟ ಮಾಡಿದ ನಂತರ ಸದರಿ ಗಂಟಿ ಭರಮಗೌಡ ಈತನಿಂದ ಗುರುಶಾಂತಯ್ಯ ದಿನಾಂಕಃ06-12-1948 ರಂದು ಈ ಜಮೀನನ್ನು ಖರೀದಿ ಮಾಡಿದನು ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ಅಜ್ಜ ಹಾಲಯ್ಯನ ಸಹಿಯನ್ನು ನಾನು ನೋಡಿಲ್ಲ. ಹಾಲಯ್ಯನ ಸಹಿಯನ್ನು ನನಗೆ ಗುರುತಿಸಲು ಆಗುವುದಿಲ್ಲ. ನನ್ನ ಅಜ್ಜ ಗಂಟಿ ಭರಮಗೌಡ ಈತನಿಗೆ ಮಾರಾಟ ಮಾಡುವ ಪೂರ್ವದಲ್ಲಿ ಈ ಜಮೀನನ್ನು ಗುರುಶಾಂತಯ್ಯ ಈತನಿಗೆ ದಿನಾಂಕಃ15-07-1943 ರಂದು ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿಗೆ 1943 ರ ಕ್ರಯಪತ್ರ ತೋರಿಸಿ ಕೇಳಲು ಸದರಿ ಕ್ರಯಪತ್ರವನ್ನು ಹಾಲಯ್ಯ ಈತ ಗುರುಶಾಂತಯ್ಯ ಇವನಿಗೆ ಮಾಡಿಕೊಟ್ಟಿದ್ದ ಎಂದರೆ ಗೊತ್ತಿಲ್ಲ. 1943 ರಲ್ಲೇ ನನ್ನ ಅಜ್ಜ ಗುರುಶಾಂತಯ್ಯ ಇವನಿಗೆ ಮಾರಾಟ ಮಾಡಿದ್ದು, ಅದರ ಖಾತೆ ಆಗದೇ ಇದ್ದ ಕಾರಣ ಅದನ್ನು ಎರಡನೇ ಬಾರಿ ಗಂಟಿ ಭರಮಗೌಡ ಎನ್ನುವವನಿಗೆ ಮಾರಾಟ ಮಾಡಿದನು ಎಂದರೆ ಸರಿಯಲ್ಲ. ಸಾಕ್ಷಿ ಅವೆಲ್ಲಾ ಸೃಷ್ಠಿ ಮಾಡಿದ ದಾಖಲೆಗಳು ಎಂದು ಹೇಳುತ್ತಾರೆ. ನನ್ನ ಅಜ್ಜ

ಈಗಾಗಲೇ ತನ್ನ ಹಿಸ್ಸೆಯ ಜಮೀನನ್ನು ಮಾರಾಟ ಮಾಡಿರುವ ಕಾರಣ, ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1943 ರಲ್ಲಿ ಆದ ಕ್ರಯಪತ್ರದಲ್ಲಿ 12 ಎಕರೆ 20 ಗುಂಟೆ ಪೈಕಿ ಅರ್ಧ ಹಿಸ್ಸೆ 6 ಎಕರೆ 10 ಗುಂಟೆ ಪಶ್ಚಿಮ ಭಾಗದ್ದನ್ನು ನನ್ನ ಅಜ್ಜ ಮಾರಾಟ ಮಾಡಿದ್ದಾರೆ ಎಂದು ಸ್ಪಷ್ಟವಾಗಿ ಇದೆ ಎಂದರೆ ಸರಿಯಲ್ಲ. ನನ್ನ ಅಜ್ಜ ಮಾರಾಟ ಮಾಡಿರುವ ಕ್ರಯಪತ್ರಗಳನ್ನು ನಾನೇ ಹಾಜರುಪಡಿಸಿರುವ ಕಾರಣ, ನನಗೆ ಅದರ ಬಗ್ಗೆ ಮಾಹಿತಿ ಇದ್ದರೂ ಪ್ರತಿವಾದಿಯರ ಜಮೀನನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ.

ನನಗೆ ಕನ್ನಡ ಓದಲು ಬುರುತ್ತದೆ. ಸಾಕ್ಷಿಗೆ ನಿ.ಪಿ-6 ನ್ನು ತೋರಿಸಿ ಕೇಳಲು, ಸದರಿ ಮುಟೇಷನ್ ಎಂಟ್ರಿಯಲ್ಲಿ ಜಮೀನು ಯಾರ ಯಾರಿಗೆ ಮಾರಾಟ ಆಗಿದೆ ಎಂದು ನಮೂದು ಇದೆ ಎಂದರೆ ಸಾಕ್ಷಿ ನಾನು ಮರಿತ್ತಿದ್ದೇನೆ ಎಂದು ಹೇಳುತ್ತಾರೆ. ನಿ.ಪಿ-6 ರಲ್ಲಿ ಹಾಲಪ್ಪ ಬಿನ್ ನಂದಿತಾವರೆ ನಂದಯ್ಯ ಈತನಿಂದ ಅವರ ಅಣ್ಣ ಗುರುಶಾಂತಯ್ಯ ನಂದಿಗುಡಿ ಇವರಿಗೆ ರೂ.100/-ಗಳಿಗೆ ಕ್ರಯ ಎಂದು ನಮೂದು ಇದೆ ಎಂದರೆ ಸರಿ. ಹಿಸ್ಸಾ ನಂಬರ್ 43 ಎಂದು ನಮೂದು ಇದೆ ಎಂದರೆ ಸರಿ. ನಂತರದಲ್ಲಿ ಗುರುಶಾಂತಯ್ಯ ಇವನಿಗೆ 12 ಎಕರೆ 20 ಗುಂಟೆ ಪೌತಿ ಖಾತೆ ಬದಲಾಣೆ ಆಗಿದೆ ಎಂದರೆ ಸರಿ. ಪೌತಿ ಖಾತೆ ಆಗುವ ಪೂರ್ವದಲ್ಲಿ ಭರಮಗೌಡ ಈತನಿಂದ ರೂ.800/-ಕ್ಕೆ ಖರೀದಿ ಮಾಡಿದ ಬಗ್ಗೆ ನಮೂದು ಇದೆ ಎಂದರೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ದಾಖಲಾತಿಗಳ ಪ್ರಕಾರ ನನ್ನ ಅಜ್ಜ ತನ್ನ ಹಿಸ್ಸೆಯನ್ನು ಮಾರಾಟ ಮಾಡಿದ ವಿಷಯ ನನಗೆ ಗೊತ್ತಿದ್ದರೂ, ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ಈ ದಾವಾ ಆಸ್ತಿಗಳ ಕುರಿತು ನನ್ನ ತಂದೆಯಿಂದ ಸಾಕ್ಷಿ ಮಾಡಿಸಲು ತೊಂದರೆ

ಇಲ್ಲ ಎಂದರೆ ಸಾಕ್ಷಿ ನನ್ನ ತಂದೆ ಅವಿದ್ಯಾಂವತ ಎಂದು ಹೇಳುತ್ತಾರೆ. ನನ್ನ ತಂದೆಗೆ ಎಲ್ಲಾ ವಿಷಯ ಗೊತ್ತಿದ್ದರೂ ಈಗ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಆತನ ಸಾಕ್ಷಿ ಮಾಡಿಸುತ್ತಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ 1 ರಿಂದ 6, 19(ಎ) ದಿಂದ (ಡಿ) ಪ್ರತಿವಾದಿಗಳ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.